International Journal of Kannada Research 2015; 1(2): 34-37



International Journal of Kannada Research
www.kannadajournal.com

**ISSN: 2454–5813**
IJSR 2015; 1(2): 34-37
© 2015 IJKS
www.kannadajournal.com
Received: 11-07-2015
Accepted: 13-08-2015

**ದೇವನೂರ ಮಹಾದೇವ**
ಡಾ.ವಾಮದೇವ. ಎಚ್.ಬಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩

**Correspondence**
**ದೇವನೂರ ಮಹಾದೇವ**
ಡಾ.ವಾಮದೇವ. ಎಚ್.ಬಿ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦೦೦೩

# ಒಡಲಾಳ

**ದೇವನೂರ ಮಹಾದೇವ**

ದಲಿತ ಲೋಕದ ಅನಾವರಣದ ರುವಾರಿ' ಎಂದೇ ಪ್ರಸಿದ್ಧರಾದ ಕಥೆಗಾರ ದೇವನೂರು ಮಹದೇವ ಅವರು ಹುಟ್ಟಿದ್ದು ೧೯೪೮ರಲ್ಲಿ ನಂಜನಗೂಡು ತಾಲ್ಲೂಕು, ದೇವನೂರಿನಲ್ಲಿ ಜನನ. ತಂದೆ ನಂಜಯ್ಯ, ತಾಯಿ ನಂಜಮ್ಮ. ಇವರು ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ೧೯೭೫ ರಿಂದ ೧೯೮೯ ರ ಅವಧಿಯಲ್ಲಿ ಮೈಸೂರಿನ ಭಾರತೀಯ ಭಾಷಾ ಕೇಂದ್ರದಲ್ಲಿ ಉದ್ಯೋಗನಿರತರಾಗಿದ್ದ ಇವರು ನಂತರದ ವರ್ಷಗಳಲ್ಲಿ ಪೂರ್ಣಾವಧಿಯ ಕೃಷಿಕರಾಗಿದ್ದಾರೆ. ಕನ್ನಡ ಕಥಾ ಸಾಹಿತ್ಯಕ್ಕೆ ಹೊಸ ದಿಕ್ಕು ತೋರಿಸದ ದೇವನೂರು ಮಹಾದೇವ ನವ್ಯೋತ್ತರ ಸಾಹಿತ್ಯ ಸಂದರ್ಭದ ಅಗ್ರಗಣ್ಯ ಲೇಖಕರಲ್ಲೊಬ್ಬರು. ವರ್ಗ ಸಂಘರ್ಷದ ಕಲ್ಪನೆಯನ್ನು ತಮ್ಮ ಕಥೆಗಳಲ್ಲಿ ಕಟ್ಟಿಕೊಡುವ ದೇವನೂರು ಮಹಾದೇವ ಅವರು ಬರೆದದ್ದು ಗಾತ್ರದಲ್ಲಿ ಅತ್ಯಂತ ಕಡಿಮೆಯಾದರೂ ಸತ್ವದಲ್ಲಿ ಅನನ್ಯವಾದದು. 'ದ್ಯಾವನೂರು', 'ಒಡಲಾಳ', 'ಕುಸುಮ ಬಾಲೆ' ಗಳ ಜೊತೆಗೆ 'ಗಾಂಧಿ ಮತ್ತು ಮಾವೊ', 'ನೋಡು ಮತ್ತು ಕೂಡು', 'ನಂಬಿಕೆಯ ನಂಟ', 'ಎದೆಗೆ ಬಿದ್ದ ಅಕ್ಷರ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ೧೯೯೧ರಲ್ಲಿ "ಕುಸುಮ ಬಾಲೆ"ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ.

ಪ್ರಸ್ತುತ ರೈತ ಮತ್ತು ದಲಿತ ಚಳುವಳಿಗಳ ಸಮನ್ವಯದ ಪ್ರಯತ್ನಕ್ಕೆ ಕೈಹಾಕಿರುವ, ಕರ್ನಾಟಕ ಸರ್ವೋದಯ ಪಕ್ಷದ ನೇತೃತ್ವ ವಹಿಸಿಕೊಂಡಿರುವ ಮಹದೇವ ಅವರ ಕಥೆಗಳಲ್ಲಿ ರೊಚ್ಚು, ಆವೇಶಗಳು ಕಾಣದೆ ಸಂಯಮ, ಕಲಾತ್ಮಕತೆ, ಕೌಶಲಗಳು ಕಾಣುವಂತೆ ಇಲ್ಲಿಯೂ ಎದ್ದು ಕಾಣುತ್ತದೆ.

೧) ದೇವನೂರ ಮಹಾದೇವ ಅವರು ಬರೆದಿರುವ "ಒಡಲಾಳ" ದಲಿತ ವರ್ಗದ ಜನರ ಜೀವನ ಸೌರೂಪದ ಒಂದು ಮುಖವನ್ನು ಚಿತ್ರಿಸುವ ನೀಳ್ಗತೆಯಾಗಿದೆ. ದಲಿತ ವರ್ಗದ ಜನರ ಒಡಲ ಆಳದಲ್ಲಿ – ಎಂದರೆ ಮನಸ್ಸಿನಲ್ಲಿರುವುದು ದುಃಖ–ಚಿಂತೆ, ಬಡತನ ಅವರ ಬದುಕಲ್ಲಿ ಹಾಸುಹೊಕ್ಕಾಗಿರುತ್ತದೆ ಎಂಬುದನ್ನು ಚಿತ್ರಿಸುವುದರೊಡನೆ ಪೋಲೀಸ್ ಇಲಾಖೆಯವರೂ ಇವರನ್ನು ಹೇಗೆ ಶೋಷಣೆಗೊಳಪಡಿಸುವರೆಂಬುದನ್ನೂ ಚಿತ್ರಿಸಲಾಗಿದೆ. ಗ್ರಾಮ್ಯ ಭಾಷೆಯ ಸೊಗಡು ಇಲ್ಲಿ ಮೆರೆದಿದೆ. ಸಾಕವ್ವ ಮುಪ್ಪಡರಿಸಿದ್ದರೂ ಅವಳ ಕೋಪಕ್ಕೆ ಮುಪ್ಪಡರಿಸಿರಲಿಲ್ಲ. ಒಂದು ದಿನ ಅವಳು ದೇವರಿಗೆಂದು ಬಿಟ್ಟಿದ್ದ ಹುಂಜ ಮನೆಗೆ ಬಾರದೆ ಚಿಂತಿಸುವಂತಾಯಿತು. ಆದರೂ ಅದು ಬಂದೇ ಬರುವುದೆಂದು ನಿದ್ರೆ ಹೋದಳು. ಸಾಕವ್ವ ಕೈಲಾಗದ ಮುದುಕಿಯಾಗಿದ್ದರೂ ಅವಳ ಯೋಗಕ್ಷೇಮವನ್ನು ಅವಳ ಮಕ್ಕಳು, ಸೊಸೆಯಂದಿರು ಅಷ್ಟಾಗಿ ನೋಡಿಕೊಳ್ಳುತ್ತಿರಲಿಲ್ಲ.

ಸಾಕವ್ವನದು ಸಣ್ಣ ಸಂಸಾರವಾಗಿರಲಿಲ್ಲ. ದೊಡ್ಡ ಮಗ ಕಾಳಣ್ಣ ಸೋಮಾರಿ, ಎರಡನೆಯ ಮಗ ಸಣ್ಣಯ್ಯನಿಗೆ ಮದುವೆಯಾಗಿ ಮೂರು ಮಕ್ಕಳು. ಮಗಳು ಗೌರವ್ವನಿಗೆ ಮದುವೆಯಾಗಿತ್ತು; ಆದರೆ ಗಂಡನ ಮನೆಯಿಂದ ಓಡಿಬಂದು ಮಗನಾದ ಶಿವು ಮತ್ತು ರೋಗಿಷ್ಠ ಮಗುವನ್ನು ಬೆಳೆಸುತ್ತಿದ್ದಳು. ಪುಟ್ಟಗೌರಿ ಹೆಸರಿಗೆ ತಕ್ಕಂತೆ ತೀರ ಪುಟ್ಟವಳಾಗಿರದೆ ಮದುವೆಗೆ ಸಿದ್ಧಳಾಗಿದ್ದಳು. ಗೌರಮ್ಮ ಶಿವುನನ್ನು ಸಾಕುವುದರಲ್ಲಿ ಮಗ್ನಳಾಗಿದ್ದಳು. ಪುಟ್ಟಗೌರಿ ಮಾಡಿದ ಕೂಲಿನಾಲಿಯೆಲ್ಲ ತಾಯಿಯ ಕೈಗೆ ಹೋಗುತ್ತಿತ್ತು. ಸಾಕವ್ವನ ಕಿರಿಯ ಮಗ ಗುರುಸಿದ್ದು ಮಾರಿಗುಡಿಯನ್ನು ಆಶ್ರಯ ಮಾಡಿಕೊಂಡಿದ್ದನು. ಅವನು ಗಾರೆ ಕೆಲಸ, ರೇಷ್ಮೆ ಗೂಡಿನ ವ್ಯಾಪಾರ, ಚಿಲ್ಲರೆ ಅಂಗಡಿಯಿಟ್ಟು ವ್ಯಾಪಾರ ಮಾಡಿ, ಕೊನೆಗೆ ನಾಟಕದಲ್ಲಿ ಪಾರ್ಟು ಮಾಡುವ ಕಾಯಕಕ್ಕಿಳಿದಿದ್ದನು.

೨) ಸಾಕವ್ವ ಮಾರನೆಯ ದಿನ ಬೇಗನೆದ್ದು ತನ್ನ ಹುಂಜಕ್ಕಾಗಿ ಹುಡುಕಾಡಿದಳು ಸಿಕ್ಕಲಿಲ್ಲ. ಅವಳು ತನ್ನ ಸವತಿ ಕೆಂಪಮ್ಮನೇ ಕದ್ದಿರಬೇಕೆಂದು ಅವಳ ಮನೆಯ ಕಡೆಗೆ ನಡೆದು ವಿಫಲಳಾದಳು. ಸಾಕವ್ವ ಕೆಂಪಮ್ಮನ ಮನೆಯ ಮುಂದಿದ್ದ ತಿಪ್ಪೆಯನ್ನು ಕೆದರಿ ತನ್ನ ಹುಂಜದ ರೆಕ್ಕೆ ಪುಕ್ಕಗಳಿಗಾಗಿ ಹುಡುಕಾಡಿದಳು. ಅಲ್ಲಿ ಏನೂ ಕಾಣಲಿಲ್ಲ. ಈ ಕೆಲಸ ಮಾಡುತ್ತಿರುವಾಗ ಸಣ್ಣ ಮಗಳು ಪುಟ್ಟಿ ಬಂದು ವಿಚಾರಿಸಿ ವಿಷಯವನ್ನು ಎಲ್ಲೆಡೆ ಪ್ರಚಾರ ಮಾಡಿದಳು. ಸಾಕವ್ವ ಮನೆಗೆ ಹಿಂದಿರುಗಿ ಮನೆಯ ಮುಂದಿನ ಅಂಗಳದಲ್ಲಿ ಕುಳಿತು "ನನ್ನ ಕೋಳಿ ತಿಂದವರ ಮನೆ ಮಣ್ಣಾಗಲಿ: ನನ್ನ ಮನೆ ದೇವರು ಸತ್ಯ ಇದ್ದರೆ ನನ್ನ ಕೋಳಿ ಮುರಿದವರ ಮನೆ ಮುರಿದುಹೋಗಲಿ" ಎಂದು ಅರಚುತ್ತಾ

ಮಣ್ಣನ್ನು ಹತ್ತು ಕಡೆ ಎರಚುತ್ತಾ ಕೈಮೈಯೆಲ್ಲವನ್ನು ಮಣ್ಣು ಮಾಡಿಕೊಂಡಳು. ಆ ರಂಪಾಟವನ್ನು ನೋಡಲಾರದೆ ಗೌರಮ್ಮ ಮತ್ತು ಪುಟ್ಟ ಗೌರಿಯವರು ತಾಯಿಯ ಕೈಯನ್ನು ಹಿಡಿದು ಸಮಾಧಾನ ಹೇಳುತ್ತಾ ಮನೆಯೊಳಗೆ ಕರೆದೊಯ್ದರು.

ಸಾಕವ್ವ ಕಳೆದುಕೊಂಡ ಹುಂಜವನ್ನು ನೆನೆನೆನೆದು ಹುಚ್ಚಾದಳು. ಅವಳ ಮನಸ್ಸಿಗೆ ಸಮಾಧಾನವೇ ಬರಲಿಲ್ಲ. ಮಗಳು ಗೌರಮ್ಮ ತಾಯಿಗೆ ಆಗ್ಗಾಗೆ ನೀರು ಕುಡಿಸುತ್ತಾ ಸಮಾಧಾನ ಹೇಳುತ್ತಿದ್ದಳು. ಅವಳ ಉಪಚಾರದಿಂದ ಸಂತೋಷಗೊಂಡ ಸಾಕವ್ವ ತನ್ನ ಆಸ್ತಿ ಎಲ್ಲವನ್ನು ಗೌರಮ್ಮನ ಕಿರಿಯ ಮಗನಿಗೆ ಬರೆದು ಸಾಯುವುದಾಗಿ ಹೇಳಿದಳು. ಇದನ್ನು ಕೇಳಿದ ಮಗ ಸಣ್ಣಯ್ಯ ರಾವಣಾಸುರನಂತೆ ತಾಯಿಯ ಮೇಲೆ ರೇಗಲಾರಂಭಿಸಿದನು. ತನಗೆ ಆಸ್ತಿಯಲ್ಲಿ ಹಕ್ಕಿದೆಯೆಂದು ಸಣ್ಣಯ್ಯ ವಾದಿಸಿದಾಗ ಸಾಕವ್ವ ತಾನು ಕಷ್ಟಪಟ್ಟು ಸಂಪಾದಿಸಿರುವ ಹಣದಿಂದ ಕಟ್ಟಿಸಿರುವ ಮನೆ "ಸ್ವಾರ್ಜಿತ" ಎಂದೂ ಅದನ್ನು ತಾನೂ ಯಾರಿಗೆ ಬೇಕಾದರೂ ಕೊಡಬಹುದೆಂದೂ ಹೇಳಿಬಿಟ್ಟಳು. ಆಗ ಸಣ್ಣಯ್ಯ ತನ್ನ ಮಕ್ಕಳೆಲ್ಲರನ್ನು ತಾಯಿಯ ಮುಂದೆ ತಳ್ಳೀ "ಇವರೆಲ್ಲರನ್ನೂ ಬೀದಿ ಪಾಲು ಮಾಡಿಬಿಡು" ಎಂದು ನುಡಿದನು. ಆಗ ಸಾಕವ್ವ ಸ್ವಲ್ಪ ಮೃದುವಾದರೂ ಮಗನಾದ ಸಣ್ಣಯ್ಯ ಚೆನ್ನಾಗಿ ಸಂಪಾದಿಸಿ ಮನೆ ಬೆಳಗದಿದ್ದುದನ್ನು ನೆನೆದು ಹೆಂಚು ಹಾಸಿದ ಜಾಗದಲ್ಲೆಲ್ಲ ಹುಲ್ಲು ಹಾಸುವಂತಹ ದುಃಸ್ಥಿತಿ ಬಂದಿರುವುದನ್ನು ಮಗನಿಗೆ ತೋರಿಸಿ ಚೆನ್ನಾಗಿ ಬೈದಳು. ಆದರೆ ಸಣ್ಣಯ್ಯ ಸಂಪಾದಿಸಲಾಗದೆ ಇದ್ದುದರಿಂದ ಅವನು ತಾಯಿಗೆ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಸಣ್ಣಯ್ಯನ ಹೆಂಡತಿ ಚೆಲುವಮ್ಮ ಈ ಸಂಭಾಷಣೆಯನ್ನು ಕೇಳೀ ತನ್ನ ಕೊಠಡಿಯಿಂದ ಬಾಣದಂತೆ ಚಿಮ್ಮಿಬಂದು "ಅದೇನತ್ತೆಮ್ಮ....ನನ್ನ ಆಸ್ತಿ ನನ್ನ ಆಸ್ತಿ ಅಂತೀರಲ್ಲ" ಎಂದು ಪ್ರಶ್ನಿಸಿದಳು. ಶಕವ್ವ ರೇಗಿ "ನನ್ನ ಹಟ್ಟಿ ನನ್ನ ಆಸ್ತಿ. ಇದರಲ್ಲೇ ಬಿಕನಾಸಿ ನೀನೂ ಬಿದ್ದಿರೋದು" ಎಂದಳು. ಚೆಲುವಮ್ಮ ಮಾತಿಗೆ ಮಾತು ಸೇರಿಸಿ "ಎಷ್ಟು ಇಟ್ಟಿದ್ದೀರಿ" ಎಂದು ಪ್ರಶ್ನಿಸಿದಳು. ಅಲ್ಲದೆ ಇರುವ ನಾಲ್ಕು ಎಕರೆ ಭೂಮಿಯನ್ನು ಮಳೆ ಬಂದರೂ ಬೆಳೆ ಬಾರದು: ಇರೋ ಮನೆಗೆ ಹುಲ್ಲು ಹಾಸಿದೆ: ಆಸ್ತಿಯನ್ನು ಮೂವರು ಗಂಡು ಮಕ್ಕಳಿಗೆ ಹಂಚಿದರೆ ತಲೆಗೆ ಎರಡು ಎಕರೆ ಸಿಗೋದಿಲ್ಲ; ಇದೆಂತಹ ಆಸ್ತಿ? ಎಂದು ಸೊಸೆ ಪ್ರಶ್ನಿಸಿದಳು. ಸಾಕವ್ವ ಸುಮ್ಮನಿರಲಿಲ್ಲ. ಇರೋ ಆಸ್ತೀಲೆ ಚೆಲುವಮ್ಮ ಜೀವನ ಮಾಡುತ್ತಿರುವುದಾಗಿ ಹೇಳಿದಾಗ ಆ ಆಸ್ತಿಗೆ ಬೆಂಕಿಹಾಕಿ ತವರಿಗೆ ಹೊರಟುಹೋಗುವುದಾಗಿ ಚೆಲುವಮ್ಮ ನುಡಿದು ಕೋಣೆ ಸೇರಿಕೊಂಡಳು.

ಸಾಕವ್ವ ಮೊದಲೇ ಕೋಪಿಷ್ಠೆ. ಸೊಸೆಯಿಂದ ಈ ರೀತಿ ಮಾತುಗಳನ್ನು ಕೇಳಿದ ಮೇಲೆ ರಾದ್ಧಾಂತ ಮಾಡಿದಲು. ಮಗನಾದ ಸಣ್ಣಯ್ಯ ಸಮಾಧಾನ ಮಾಡಲು ಯತ್ನಿಸಿದಾಗ "ಕೇಳಿದೆಯೇನೋ ಗೃಹಸ್ಥ; ನಿನ್ನ ಹೆಂಡ್ತಿ ಮಾತ!" ಎಂದೂ ಮೂತಿ ತಿವಿದು, "ಅವಳೇನಾರ ಈದಿನ ನನ್ನ ಮನೇಲಿದ್ದರೆ ಅವಳನ್ನು ಹುಟ್ಟಿಲ್ಲ ಎನಿಸುತ್ತೇನೆ" ಎಂದು ಸಾವಿರ ಬಾರಿ ಸಾಕವ್ವ ಕೂಗಿದಳು. ಗೌರಮ್ಮ ತಾನು ತನ್ನ ತಾಯಿಯಿಂದ ಆಸ್ತಿ ಪಡೆಯುವುದಿಲ್ಲವೆಂದಳು. ಒಳಗೆ ನಡೆದ ಚೆಲುವಮ್ಮ ತನ್ನ ಬಟ್ಟೆಗಳನ್ನು ಟ್ರಂಕಿಗೆ ತುರುಕುತ್ತಾ ತಾನು ತೌರಿಗೆ ಹೊರಟುಹೋಗುವುದಾಗಿ ಮತ್ತೆ ಮತ್ತೆ ಹೇಳುತ್ತಿದ್ದಳು. ಅವಳ ಗಂಡ ಸಣ್ಣಯ್ಯ ಟ್ರಂಕಿನಿಂದ ಬಟ್ಟೆಯನ್ನು ತೆಗೆಯುತ್ತಾ ಹೆಂಡತಿಯ ಆರ್ಭಟವನ್ನು ಕಡಿಮೆ ಮಾಡಲು ಯತ್ನಿಸುತ್ತಿದ್ದನು. ಪುಟ್ಟಗೌರಿ ತಾನೂ ಒಂದಲ್ಲ ಒಂದು ದಿನ ಹಟ್ಟಿಯಿಂದ ಹೋಗುವವಳೆಂದು ಹೇಳಿದಳು. ಇಂತಹ ಹೊತ್ತಿನಲ್ಲಿ ಮನೆಗೆ ಬಂದ ಗುರುಸಿದ್ದು ಪರಿಸ್ಥಿತಿ ಸರಿಯಲ್ಲವೆಂದುಕೊಂಡು ಒಳಗೆ ಬರದೆ ಹಿಂದಿರುಗಿದನು.

ಚೆಲುವಮ್ಮ ಮತ್ತು ಸಣ್ಣಯ್ಯ ಸರದಿಯಂತೆ ಹಣೆ ಚಚ್ಚಿಕೊಳ್ಳುತ್ತಿದ್ದರು. ಆ ಹೊತ್ತಿಗೆ ಕಾಳಣ್ಣ ಮನೆಗೆ ಬಂದನು. ಚೆಲುವಮ್ಮ ತನ್ನ ಟ್ರಂಕಿನೊಡನೆ ಹೊರಬರುತ್ತಿರುವುದನ್ನು ಕಂಡ ಕಾಳಣ್ಣ ಆಕೆಗೆ ಕಿರುಮನೆಗೆ ಹೋಗಲು ಹೇಳಿದನು. ಅವನ ಮಾತನ್ನು ಚೆಲುವಮ್ಮ ತೆಗೆದುಹಾಕಲಿಲ್ಲ. ಕಾಳಣ್ಣ ತಾಯಿಗೆ ಸಮಾಧಾನ ಹೇಳಿ ಟೀ ಕುಡಿಸಿದನು. ಕಾಳಣ್ಣನ ಹೆಂಡತಿ ಗಂಡನಿಗೆ ಟೀ ಕೊಟ್ಟು ಜೊತೆಗೆ ಕಡ್ಲೆಪುರಿಯನ್ನು ಕೊಟ್ಟಳು. ಅದನ್ನು ಕಾಳಣ್ಣ ತಾಯಿಗೂ ಅಲ್ಲಿದ್ದ ಮಕ್ಕಳಿಗೂ ಹಂಚಿ ಹಟ್ಟಿಯನ್ನು ಹದಕ್ಕೆ ತಂದನು.

ಮನೆ ತುಂಬ ಜನ ತುಂಬಿರುವುದನ್ನು ನೋಡಿದ ಕಾಳಣ್ಣ "ಎಲ್ಲರೂ ಮನೇಲಿ ಕೂತರೆ ಧನಧಾನ್ಯ ಆಕಾಶದಿಂದ ಉದುರುವುದಾ?" ಎಂದು ಪ್ರಶ್ನಿಸಿದನು. ಆಗ ಕೊನೆ ತಂಗಿ ಗೌರಮ್ಮ ತಾನು ಊರೆಲ್ಲ ತಿರುಗಿದರೂ ಒಬ್ಬರೂ ತನ್ನನ್ನು ಕೆಲಸಕ್ಕೆ ಕರೆಯಲಿಲ್ಲವೆಂದಳು. ಚೆಲುವಮ್ಮ ಸಮಾಧಾನಗೊಂಡು ಕುಡುಗೋಲು ಹಿಡಿದು ಸೌದೆ ತರಲು ಕಾಳಣ್ಣನ ಹೆಂಡತಿಯನ್ನು ಕರೆದಳು. ಆದರೆ ಅವಳು ತನ್ನ ಗಂಡ ಆಗತಾನೆ ಮನೆಗೆ ಬಂದಿರುವೆಂದೂ, ಸಂಜೆ ಸೌದೆ ತರೋಣವೆಂದೂ ಹೇಳಿ ಮುಂದೂಡಿದಳು. ಈ ಮನೆಯಲ್ಲಿದ್ದ ಗೌರಮ್ಮನ ದೊಡ್ಡ ಮಗ ರೋಗಿಯಾಗಿದ್ದನು. ಅವನಿಗೆ ಯಾವ ರೋಗ ಎಂದು ಹೇಳಿರಲಿಲ್ಲ. ಅವನು ತನ್ನ ಪಾಡಿಗೆ ತಾನಿರುತ್ತಿದ್ದನು. ಇವನು ಯಾವಾಗಲೂ ದುಪ್ಪಟಿ ಹೊದ್ದು ಮುಂಕಾಗಿರುತ್ತಿದ್ದನು. ಆದ್ದರಿಂದ ಗುರುಸಿದ್ದು(ಸೋದರ ಮಾವ) ಅವನನ್ನು "ದುಪ್ಪಟಿ ಕಮಿಷನರ್" ಎಂದು ಹಾಸ್ಯ ಮಾಡುತ್ತಿದ್ದನು.

೩) ಆ ದಿನ ಶಿವು ಮನೆಗೆ ಬರುವ ಹೊತ್ತಿಗೆ ಮಧ್ಯಾಹ್ನವಾಗಿತ್ತು. ಮನೆಯೊಳಗಿದ್ದವರೆಲ್ಲ ಒಂದೊಂದು ಕಡೆ ಒಂದೊಂದು ರೀತಿಯಲ್ಲಿ ಮಲಗಿದ್ದರು. ಪುಟ್ಟಗೌರಿ ಮಾತ್ರ ನೀಲಿ ಬಣ್ಣದ ನೀರಿನಲ್ಲಿ ನವಿಲಿನ ಚಿತ್ರ ಬರೆಯುವುದರಲ್ಲಿ ಮಗ್ನಳಾಗಿದ್ದಳು. ಶಿವು ತನ್ನ ಅಣ್ಣನೊಡನೆ ಉಪ್ಪಿಟ್ಟನ್ನು ಹಂಚಿಕೊಂಡು ತಿನ್ನುತ್ತಾ ನವಿಲು ಬರೆಯುವುದನ್ನು ನೋಡುತ್ತಿದ್ದನು. ಪುಟ್ಟಗೌರಿ ನವಿಲಿನ ಚಿತ್ರವನ್ನು ಬರೆದು ಮುಗಿಸಿದ ಮೇಲೆ ಶಿವು ಅಜ್ಜಿಯನ್ನು ಎಬ್ಬಿಸಿ ನವಿಲನ್ನು ತೋರಿಸಿದನು. ಸಾಕವ್ವ ನವಿಲನ್ನು ನೋಡಿ ಪುಟ್ಟಗೌರಿಯ ಮೇಲೆ ರೇಗಿದಳು. ಭತ್ತ ಕುಟ್ಟುವುದನ್ನು ಬಿಟ್ಟು ನವಿಲನ್ನು ಬರೆಯುವುದು ತಪ್ಪೆಂದಳು: ಆದರೆ ಆ ಮನೆಯಲ್ಲಿ ಕುಟ್ಟಲು ಭತ್ತವಿರಲಿಲ್ಲವೆಂಬದನ್ನು ಅವಳು ಮರೆತಿದ್ದಳು. ಶಿವು ಗಣಿತದ ಲೆಕ್ಕ ಮಾಡುತ್ತಾ ಬಡ್ಡಿ ಲೆಕ್ಕ ಹಾಕಲಾರದೆ ಸಂಕಟ ಪಡುತ್ತಿದ್ದಾಗ ಸಾಕವ್ವ ತಾನು ಸಾಲ ತಂದ ಹಣದ ಬಡ್ಡಿ ಲೆಕ್ಕಾಚಾರವನ್ನು ಕೇಳಿ ಶಿವು ಉತ್ತರಿಸದಿದ್ದಾಗ ಸಲೀಸಾಗಿ ತಾನೇ ಉತ್ತರ ಹೇಳಿದಳು. ಶಿವುಗೆ ಲೆಕ್ಕ ಬಗೆಹರಿಯದೆ ಪುಸ್ತಕ ಮುಚ್ಚಿಟ್ಟನು.

೪) ಹಳ್ಳಿಯ ಹಟ್ಟಿಗಳಲ್ಲಿ ಪಾತ್ರೆಗಳ ಧ್ವನಿ ಆರಂಭವಾಗುತ್ತಿದ್ದಂತೆ ಸಾಕವ್ವನ ಕಿವಿ ನೆಟ್ಟಗಾಯಿತು. ಅವಳು ಕತ್ತಲಿನಲ್ಲಿ ಶಿವುನನ್ನು ಕರೆದುಕೊಂಡು ತನ್ನ ಹುಂಜವನ್ನು ಹುಡುಕಿಕೊಂಡು ಹೊರಟಳು. ಶಿವು ಕತ್ತಲೆಯಲ್ಲಿ ಹೊರಡಲು ಹೆದರಿದನು. ಆದರೆ ಸಾಕವ್ವ ತಾನು ಯಮಳಂತಿರುವುದಾಗಿಯೂ ತನ್ನನ್ನು ಯಮಧರ್ಮನೇ ಕರೆದೋಯ್ದರೂ ನರಕದಲ್ಲಿ ಅನುಭವಿಸುವ ಕಷ್ಟಕ್ಕಿಂತ ಹೆಚ್ಚಿನ ಕಷ್ಟಗಳನ್ನು ಭೂಲೋಕದಲ್ಲಿ ಅನುಭವಿಸಿರುವುದಾಗಿ ಹೇಳಿ ಬಿಡಿಸಿಕೊಂಡು ಬರುವೆನೆಂದು ಹೇಳಿ ಶಿವುಗೆ ಧೈರ್ಯ ತುಂಬಿದಳು. ಅಲ್ಲದೆ ತನ್ನ ಧೈರ್ಯಕ್ಕೆ ಮೆಚ್ಚಿ ಯಮ ಏನಾದರೂ ವರ ಬೇಡಿಕೊ ಎಂದರೆ ತನ್ನ ಮೊಮ್ಮಗನನ್ನು ರಾಜನನ್ನಾಗಿ ಮಾಡೆಂದು ಕೇಳಿಕೊಳ್ಳುವುದಾಗಿ ಹೇಳಿ ಶಿವುಗೆ ಸಂತೋಷವನ್ನುಂಟುಮಾಡಿದಳು. ಸಾಕವ್ವ ಒಂದೊಂದು ಹಟ್ಟಿಯ ಮುಂದೂ ನಿಂತು ಕೋಳಿ ವಾಸನೆ ಸಿಗುವುದೋ ಎಂದು ಪರೀಕ್ಷಿಸಿ ಮುಂದುವರಿದು ಪರ್ವತಯ್ಯನ ಹಟ್ಟಿಯ ಬಳಿ ವಾಸನೆ ಸಿಕ್ಕು ಒಳಗೆ ಹೋದಳು. ದೇವೀರಮ್ಮನ ಮನೆಯಿಂದ ಒಂದು ಲೋಟ ಉದ್ಧ(ನೀರು ಸಾರು)ವನ್ನು ಪಡೆದು ಅದರ ವಾಸನೆಯಲ್ಲಿ ಹುಂಜವನ್ನು ಹುಡುಕಿದಳು. ಸಾರಿನಲ್ಲಿದ್ದ ತುಂಡನ್ನು ತೆಗೆದು ಶಿವುಗೆ ಕೊಟ್ಟು "ಅದು ಬಾಡೇನು ನೋಡು" ಎಂದಳು. ಬಾಡು ಎಂದರೆ ಮಾಂಸ: ಅದು ಮಾಂಸದ ತುಂಡಾಗಿರಲಿಲ್ಲ. ಅಣಬೆಯಾಗಿತ್ತು. ಸಾಕವ್ವ ಹುಂಜವನ್ನು ಹುಡುಕಲು ನಡೆಸಿದ ಪ್ರಯತ್ನ ವಿಫಲವಾಯಿತು. ಅವಳು ಮನೆಗೆ ಹಿಂದಿರುಗಿದಳು.

೫) ಕಾಳಣ್ಣ ಮನೆಗೆ ಬರುವ ಹೊತ್ತಿಗೆ ಕತ್ತಲಾಗಿತ್ತು. ಮನೆಯಲ್ಲಿ ದೀಪವಿರಲಿಲ್ಲ. ಆದ್ದರಿಂದ ಹೆಂಡತಿಯನ್ನು ಕರೆದು ತರಗೆಲೆ ಹಾಕಿ ಬೆಂಕಿ ಮಾಡಲು ಹೇಳಿದನು. ಅವಳು ಒಂದು ರಾಶಿ ತರಗೆಲೆ ತಂದು ಬೆಂಕಿ ಮಾಡಿದ ಮೇಲೆ ಮನೆಯವರೆಲ್ಲರೂ ಅದರ ಸುತ್ತ ಕುಳಿತು ಕಡ್ಲೆಕಾಯಿ ರಾಶಿ ಹಾಕಿಕೊಂಡು ಬೆಂಕಿಯಲ್ಲಿ

ಸುಟ್ಟುಕೊಂಡು ತಿನ್ನುತ್ತಾ ಹರಟೆ ಹೊಡೆಯಲಾರಂಭಿಸಿದರು. ಈ ಹರಟೆಗೆ ಚೆಲುವಮ್ಮ ಬಂದಿರಲಿಲ್ಲ. ಆದರೆ ಅವಳನ್ನು ಕರೆಸಿ ಕೂಡಿಸಿಕೊಂಡು ಹರಟೆಯನ್ನು ಮುಂದುವರೆಸಿದರು. ಸಣ್ಣಯ್ಯ, ಕಾಳಣ್ಣ, ಸಾಕವ್ವರೇ ಹೆಚ್ಚಾಗಿ ಮಾತನಾಡುತ್ತಿದ್ದರು. ಉಳಿದವರು ಕುಳಿತು ಕೇಳುತ್ತಿದ್ದರು. ಈ ಹರಟೆಗೆ ಗುರುಸಿದ್ದು ಸೇರಿರಲಿಲ್ಲ. ಅವನು ನಾಟಕದ ಪ್ರಾಕ್ಟೀಸ್ ಮಾಡ್ತಾ ಗುಡಿಯಲ್ಲಿದ್ದನು. ಅವನನ್ನು ಕರೆತರಬೇಕೆಂದು ಕಾಳಣ್ಣ ಶಿವುಗೆ ಹೇಳಿದನು. ಶಿವೂಗೆ ಕತ್ತಲಿನಲ್ಲಿ ಹೋಗಿ ಬರುವ ಧೈರ್ಯವಿರಲಿಲ್ಲ. ನಾಯಿ ಅಟ್ಟಿಸಿಕೊಂಡು ಬರಬಹುದೆಂಬ ಭಯವಿತ್ತು. ಆದ್ದರಿಂದ ಅವನು ಹೊರಗೆ ಹೋಗಲು ಒಪ್ಪಲಿಲ್ಲ. ಆಗ ಪುಟ್ಟ ಗೌರಿ ತಾನು ಹೋಗಿ ಕರೆತರುವುದಾಗಿ ಹೇಳಿದಾಗ ಶಿವು ಅವಳ ಜೊತೆ ಹೋಗಲು ಒಪ್ಪಿದನು. ಇಬ್ಬರು ಜೊತೆಗೂಡಿ ಮಾರಿಗುಡಿಗೆ ಹೋಗಿ ಗುರುಸಿದ್ದೂನ್ನು ಬಲವಂತ ಮಾಡಿ ಮನೆಗೆ ಕರೆದರು. ಗುರುಸಿದ್ದು ಮನೆಗೆ ಬಂದು ಬೆಂಕಿ ಮುಂದೆ ಕುಳಿತು ಚಳಿ ಕಾಯಿಸುತ್ತಾ ಹರಟೆಗೆ ಸೇರಿಕೊಂಡನು. ಬೆಂಕಿ ಧಗಧಗನೆ ಉರಿದಾಗ ಅಲ್ಲಿದ್ದವರ ನೆರಳು ಗೋಡೆಗಳ ಮೇಲೆ ಗಾಳಿ ಬೀಸಿದಂತೆ ವಿಚಿತ್ರವಾದ ಆಕಾರದಲ್ಲಿ ಮೂಡುತ್ತಿತ್ತು.

ಗುರುಸಿದ್ದು ಕಡ್ಲೆಕಾಯಿ ರಾಶಿಗೆ ಕೈಹಾಕಿದಾಗ ಅವನು ಕೈಗೆ ಕಟ್ಟಿಕೊಂಡಿದ್ದ ವಾಚು ಹೊಳೆದು ಎಲ್ಲರ ಗಮನವನ್ನು ಸೆಳೆಯಿತು. ಕಾಳಣ್ಣ "ಯಾರದಯ್ಯ ಗಡಿಯಾರ?" ಎಂದಾಗ "ನಂದೆ, ತೆಗೆದುಕೊಂಡೆ" ಎಂದನು. ಕಾಳಣ್ಣ ನಂಬಲಿಲ್ಲ. ಇತ್ತೀಚಾಡಿ ಆಗಾಗ್ಗೆ ಗುರುಸಿದ್ದ ಹಣವನ್ನು ಕಳೆದುಕೊಳ್ಳುತ್ತಿದ್ದುದು ಅವನಿಗೆ ಗೊತ್ತಿತ್ತು. ಅದರಂತೆ ಯಾರೋ ಜೂಜಿಗೆ ಹಣ ಬೇಕಾದಾಗ ವಾಚುಕೊಟ್ಟು ಜೂಜಿನಲ್ಲಿ ಸೋತು ಗುರುಸಿದ್ದುವಿನ ಪಾಲಿಗೆ ಅದು ಬಂದಿರಬೇಕೆಂದು ಕಾಳಣ್ಣ ವಾದಿಸಿದನು. ಗುರುಸಿದ್ದೂಗೆ ಅದರ ವಿಚಾರ ಚರ್ಚೆಯಲ್ಲಿ ಮುಂದುವರಿಯುವುದು ಇಷ್ಟವಾಗಲಿಲ್ಲ. ಆದ್ದರಿಂದ ಮಾತಿನ ದಿಕ್ಕನ್ನು ಬದಲಾಯಿಸಿದನು. ಹಿಂದಿನ ದಿನ ಸಗಡೂರಿಗೆ ಹೋದಾಗ ಶಿವಬಸಪ್ಪನ ಹೋಟೆಲಿನಲ್ಲಿ ಜನ ಕಾಫಿ, ತಿಂಡಿಗಾಗಿ ಕಿಕ್ಕಿರಿದ ಸಂಗತಿಯನ್ನು ವಿವರಿಸಿ, ತಾನು ದೋಸೆ ಕಾಫಿ ತಿಂದ ಬಗೆಯನ್ನು ಹೇಳಿ, ವಾಚ್ ನೋಡಿಕೊಂಡು ತನ್ನ ಪಾರ್ಟು ಬರುವ ಹೊತ್ತಾಯಿತೆಂದು ಹೇಳುತ್ತಾ ಗುರುಸಿದ್ದು ಹೊರಡಲು ಸಿದ್ಧವಾದನು. ಆಗ ಸಣ್ಣಯ್ಯ ಬೆಲ್ಲದ ಟೀ ಮಾಡುವುದಾಗಿ ಹೇಳಿ ಗುರುಸಿದ್ದೂನನ್ನೂ ಕೂಡಿಸಲು ಯತ್ನಿಸಿದರೂ ಗುರುಸಿದ್ದು ಒಪ್ಪದೆ ಹೊರಟು ಹೋದನು. ಚೆಲುವಮ್ಮ ಟೀ ಕಾಸಲು ಆರಂಭಿಸಿದಳು.

೧) ಪೋಲೀಸ್ ಕಾನ್‌ಸ್ಟೇಬಲ್ ರೇವಣ್ಣ ನಿವೃತ್ತನಾಗಲು ಬೇಕಾದ ಅರ್ಹತೆಯನ್ನು ಪಡೆದುಕೊಂಡಿದ್ದನು. ಸಣ್ಣಗಿದ್ದ ಈ ಪಿ.ಸಿ.ಗೆ. ಇಬ್ಬರು ಹೆಂಡಿರು, ಹನ್ನೊಂದು ಮಕ್ಕಳಿದ್ದವು. ಸರಿಯಾಗಿ ಕೆಲಸ ಮಾಡಿ ಅಭ್ಯಾಸವಿರಲಿಲ್ಲ. ದಿನವೂ ಹಿರಿಯ ಅಧಿಕಾರಿಗಳಿಂದ ಬೈಸಿಕೊಳ್ಳುತ್ತಿದ್ದನು. ಅವನನ್ನು ಡಿಸ್‌ಮಿಸ್ ಮಾಡಿದರೆ ಹೆಂಡತಿ ಮಕ್ಕಳು ಉಪವಾಸ ಬೀಳಬೇಕಾಗುವುದೆಂದು ಮಾಡಿರಲಿಲ್ಲ. ಅವನಿಗೆ ಯಾವ ಜವಾಬ್ದಾರಿಯನ್ನೂ ವಹಿಸುತ್ತಿರಲಿಲ್ಲ. ಈ ಹಳ್ಳಿಯ ಸಾಹುಕಾರ್ ಎತ್ತಪ್ಪನವರ ಮಿಲ್ಲಿನಿಂದ ದಿನವೂ ಕಡ್ಲೆಕಾಯಿ ಮೂಟೆಗಳಿಂದ ಸುಮಾರು ೩೦–೪೦ ಸೇರು ಕಡ್ಲೆಕಾಯಿ ಕಳ್ಳತನವಾಗುತ್ತಿತ್ತು. ಎತ್ತಪ್ಪನವರು ಕಳ್ಳನನ್ನು ಪತ್ತೆ ಮಾಡಲಾಗದೆ ಪೋಲೀಸ್ ಇನ್ಸ್‌ಪೆಕ್ಟರ್‌ಗೆ ಹೇಳಿದರು. ಅವರು ರೇವಣ್ಣನನ್ನು ಕರೆದು ಬೈದು ಕಡ್ಲೆಕಾಯಿ ಕಳ್ಳನನ್ನು ಪತ್ತೆ ಮಾಡಲು ಆಜ್ಞೆ ಮಾಡಿದರು. ರೇವಣ್ಣ ಕಂಬಳಿ ಹೊದ್ದು ತನ್ನ ಇರುವಿಕೆಯ ಸುಳಿವು ಕೊಡದೆ ಒಂದು ಮೂಲೆಯಲ್ಲಿ ಕುಳಿತು ರಾತ್ರಿಯೆಲ್ಲ ಕಡ್ಲೆಕಾಯಿ ಕಳ್ಳನ ಪತ್ತೆಗೆ ಕಾದು ಕೂತನು. ಎತ್ತರದ ಹಾಗೂ ದಪ್ಪಗಿದ್ದ ಆಸಾಮಿ ಚೀಲಕ್ಕೆ ಕಡ್ಲೆಕಾಯಿಯನ್ನು ತುಂಬಿ ನಡೆದಾಗ ರೇವಣ್ಣ ಆ ಕಳ್ಳನನ್ನು ಹಿಂಬಾಲಿಸಿದನು. ಅವನು ಒಂದು ಹಟ್ಟಿಯೊಳಗೆ ಹೋದನು. ರೇವಣ್ಣ ಮಾಲು ಸಮೇತ ಹಿಡಿದಿರುವುದಾಗಿ ಇನ್ಸ್‌ಪೆಕ್ಟರ್‌ಗೆ ಸುದ್ದಿ ಕಳುಹಿಸಿದನು.

೨) ರೇವಣ್ಣ ನಿದ್ರೆ ಮಾಡದೆ ಕಾಯುತ್ತಿರುವಾಗ ಇನ್ಸ್‌ಪೆಕ್ಟರ್‌ರ ಜೀಪು ಕಣ್ಣು ಕೋರೈಸುವ ಬೆಳಕನ್ನು ಚೆಲ್ಲುತ್ತಾ ಬಂದಿತು. ರೇವಣ್ಣ ವಿಷಯವನ್ನು ವಿವರಿಸಿದನು. ಇನ್ಸ್‌ಪೆಕ್ಟರ್‌ರ ಆಜ್ಞೆಯಂತೆ ಪಿ.ಸಿ.ಗಳು ಸಾಕವ್ವನ ಹಟ್ಟಿಯ ಬಾಗಿಲನ್ನು ದಬದಬ ಬಡಿದರು. ಸಾಕವ್ವ ಬಾಗಿಲು ಕುಟ್ಟುವವರನ್ನು ಶಪಿಸುತ್ತಾ ಬಾಗಿಲು ತೆಗೆದು ಯಮದೂತರಂತಿದ್ದ ಪೋಲೀಸರನ್ನು ಕಂಡು ನಡುಗಿಹೋದಳು. ಪೋಲೀಸರು ಅವಳ ಮನೆಗೆ ನುಗ್ಗಿ "ಏಯ್ ಮುದ್ಕಿ, ಎಲ್ಲಿ ನಿನ್ನ ಮಕ್ಕಳು?" ಎಂದು ಬೆದರಿಸಿದಾಗ "ಮಲ್ಗವರೆ" ಎಂದಳು. ಪೋಲಿಸರ ಧ್ವನಿಗೆ ಹಟ್ಟಿಯಲ್ಲಿದ್ದವರೆಲ್ಲ ಎದ್ದರು. ಆದರೆ ಒಬ್ಬರೂ ಎದ್ದು ಹೊರಗೆ ಬರಲಿಲ್ಲ. ರೇವಣ್ಣ ಕಾಳಣ್ಣನ ಕಡೆಗೆ ದೃಷ್ಟಿ ಹಾಯಿಸಿ ಅವನೇ ಕಳ್ಳನೆಂಬ ಸೂಚನೆಯನ್ನು ಕೊಟ್ಟ ತಕ್ಷಣ ಇನ್ಸ್‌ಪೆಕ್ಟರ್ ಮಲಗಿದ ಅವನ ಬಳಿ ಹೋಗಿ ಲಾಠಿಯಿಂದ ತಿವಿದು "ಏಳಲೇ" ಎಂದ ಗದರಿಸಿ ಕತ್ತಿನ ಪಟ್ಟಿಗೆ ಲಾಠಿ ಸಿಕ್ಕಿಸಿ ಎತ್ತಿದರು. ಕಾಳಣ್ಣನ ಹೆಂಡತಿ ಮಕ್ಕಳು ನಡುಗಿದರು. "ಏನ್ಲೆ ಎಷ್ಟು ದಿನದಿಂದ ಈ ಕಸುಬು ಮಾಡ್ತಾ ಇದ್ದಿ" ಎಂದು ಗದರಿಸಿ ಕಡ್ಲೆಕಾಯಿ ಮೂಟೆಯನ್ನು ತಕ್ಷಣ ತಂದೊಪ್ಪಿಸುವಂತೆ ಆಜ್ಞೆ ಮಾಡಿದರು. ಕಾಳಣ್ಣ ತಾನು ತಪ್ಪು ಮಾಡಿಲ್ಲವೆಂದಾಗ ಅವನ ಕಪಾಳಕ್ಕೆ ಏಟು ಬಿತ್ತು. ಪಿ.ಸಿ.ಗಳು ಕಾಳಣ್ಣನ ಸುತ್ತ ನಿಂತರು. ಹಟ್ಟಿಯಲ್ಲಿದ್ದವರೆಲ್ಲ ನಡುಗುತ್ತಿದ್ದರು.

೩) ಸಾಕವ್ವನ ಹಟ್ಟಿಯಲ್ಲಿ ಪೋಲೀಸರ ಕಿರಚಾಟ ಏರಿದಂತೆ ಸುತ್ತಲಿನ ಜನ ಹಟ್ಟಿಯ ಹೊರಗೆ ಭಾರಿ ಸಂಖ್ಯೆಯಲ್ಲಿ ಬಂದು ಸೇರಿದರು. ಪಿ.ಸಿ.ಗಳು ಜನರನ್ನು ತಳ್ಳಿದಾಗ ಹಿಂದೆ ಹೋದರೂ ಮತ್ತೆ ಜನ ಸೇರುತ್ತಿದ್ದರು. ಅಷ್ಟು ಹೊತ್ತಿಗೆ ಶಾಲು ಹೊದ್ದ ಎತ್ತಪ್ಪನವರು ಹಟ್ಟಿಗೆ ಬಂದರು. ರೇವಣ್ಣ ಕಳ್ಳನನ್ನು ಪತ್ತೆ ಮಾಡಿರುವ ಸಂಗತಿ ತಿಳಿದು ಆಶ್ಚರ್ಯಪಟ್ಟರು. ಈ ಹಟ್ಟಿಯಲ್ಲಿರುವ ಒಬ್ಬೊಬ್ಬರೂ ಸಣಕಲಾಗಿ ಸಾಯುವಂತಿದ್ದರು. ಹಟ್ಟಿಯನ್ನು ನೋಡಿದರೆ ಕಳ್ಳತ'ನ ಮಾಡಿ ಸಿರಿವಂತನಾಗಿರಬಹುದೆನ್ನಲು ಯಾವ ಸುಳಿವೂ ಇರಲಿಲ್ಲ. ಕಡ್ಲೆಕಾಯಿಯನ್ನು ಒಪ್ಪಿಸದಿದ್ದಾಗ ಇನ್ಸ್‌ಪೆಕ್ಟರ್ ಸಾಕವ್ವನ ಹಟ್ಟಿಯ ಮೂಲೆ ಮೂಲೆಗಳನ್ನು ಬಿಡದೆ ಶೋಧಿಸಿದನು. ಅವರಿಗೆ ಕಂಡದ್ದು–ಸಿಕ್ಕಿದ್ದು ಏನೆಂದರೆ ಇಪ್ಪತ್ತು ತೂತುಗಳಿದ್ದ ಪಂಚೆ–ಸೀರೆ–ರವುಕೆ–ಚಡ್ಡಿ;

ಬೀಸುವ ರಾಗಿಕಲ್ಲು; ವಿಭೂತಿ ಉಂಡೆ, ಧೂಳಿನಿಂದ ತುಂಬಿದ ದೇವರ ಪಟ; ಮಡಕೆಗಳು; ಅರ್ಧ ಸೇರು ಹುರುಳಿ; ಬೂದಿ ಕಸ ತುಂಬದ ಪೆಟ್ಟಿಗೆ; ಲಾಟೀನು; ಹರಕು ಗೋಣಿ ಚೀಲಗಳು; ನಾಲ್ಕು ಪಾತ್ರೆ–ಪಡಗ–ಅದೂ ತೂತಾದುದು–ಇಲ್ಲಣ ಮೆತ್ತಿಕೊಂಡವುಗಳು ಪೋಲೀಸ್ ಪೇದೆಗಳಿಗೆ ದೊರೆತವು. ದೇವರ ಮನೆಗೆ ಬೂಟು ಕಾಲಿನಲ್ಲಿ ನುಗ್ಗ ಹೊರಟಾಗ ಸಾಕವ್ವ "ಅಯ್ಯೋ ದೇವರ ಮನೆ ಬೂಟು ಕಾಲು" ಎಂದಳು. ಆದರೆ ಪೋಲೀಸಿನವರು ಅವಳ ಮಾತುಗಳಿಗೆ ಕಿವಿಗೊಡದೆ ಒಳಗೆ ನುಗ್ಗಿ ಶೋಧಿಸಿದರು. ಕಡ್ಲೆಕಾಯಿ ಮೂಟೆಯ ಸುಳಿವು ಎಲ್ಲೂ ಸಿಗಲಿಲ್ಲ. ರೇವಣ್ಣನ ಲೆಕ್ಕಾಚಾರ ತಿರುಗುಮುರುಗಾಯಿತು.

೪) ಸಾಕವ್ವನ ಮನೆಯಿಂದ ಪೋಲೀಸರು ಕದಲಲಿಲ್ಲ. ಹೊರಗಡೆ ಸೇರುತ್ತಿದ್ದ ಜನಸಂಖ್ಯೆ ಹೆಚ್ಚಾಗುತ್ತಿತ್ತು. ಅಷ್ಟು ಹೊತ್ತಿಗೆ ಗುರುಸಿದ್ದ ಮಾರಿಗುಡಿಯಿಂದ ಎದ್ದು ಬಂದು ಜನಗಳ ನಡುವೆ ದಾರಿ ಮಾಡಿಕೊಂಡು ಹಟ್ಟಿಯ ಬಳಿ ಬರುತ್ತಿದ್ದಂತೆ ರೇವಣ್ಣ ಅವನನ್ನು ಗುರುತಿಸಿ ತೋಳು ಹಿಡಿದು ಇನ್ಸ್‌ಪೆಕ್ಟರ್ ಬಳಿ ಕರೆತಂದು "ಇವ್ನೆ ಮಾಸ್ವಾಮಿ ರಾತ್ರಿ ಬಂದು ಹೋದವನು" ಎಂದನು. ಇನ್ಸ್‌ಪೆಕ್ಟರ್ ಅವನನ್ನು ಪ್ರಶ್ನಿಸಿದಾಗ ಗುರುಸಿದ್ದು ತಾನು ಆ ಮನೆಗೆ ರಾತ್ರಿ ಬಂದು ಮಾರಿಗುಡಿಗೆ ಹಿಂದಿರುಗಿ ಹೋದುದಾಗಿ ಒಪ್ಪಿಕೊಂಡು ತಾನು ಸಾಕವ್ವನ ಮಗನೆಂಬುದನ್ನು ತಿಳಿಸಿದನು. "ಕಡ್ಲೆಕಾಯಿ ಹೊತ್ಕೊಂಡು ಹೋಗಿ ಏನ್ಮಾಡ್ದೆ?" ಎಂದು ಪ್ರಶ್ನಿಸಿದಾಗ ಕಡ್ಲೆಕಾಯಿ ವಿಚಾರ ಗೊತ್ತಿಲ್ಲವೆಂದನು. ಇನ್ಸ್‌ಪೆಕ್ಟರ್‌ರಿಗೆ ತಲೆ ಕೆಟ್ಟಂತಾಯಿತು. ಅವರು ಪುಟ್ಟಗೌರಿಯನ್ನು ಕರೆದು ಕಡ್ಲೆಕಾಯಿ ಮೂಟೆಯ ಬಗ್ಗೆ ತನಿಖೆ ಮಾಡಿದರು. ಪುಟ್ಟಗೌರಿ ಉತ್ತರ ತೋಚದೆ ಮೌನವಾಗಿ ನಿಂತಳು. ಪಿ.ಸಿ.ಗಳು ಮನೆಯಲ್ಲಿ ಕಡ್ಲೆಕಾಯಿಯ ಮೂಟೆ ಹುಡುಕುವುದನ್ನು ಮುಂದುವರಿಸಿದರು. ಆದರೆ ಅವರಿಗೆ ಸಿಕ್ಕಿದ್ದು ಕಡ್ಲೆಕಾಯಿಯಲ್ಲ. ತುಪ್ಪವಿಲ್ಲದ ತುಪ್ಪದ ಗಡಿಗೆ, ದೇವರ ಪೋಟೋ; ಎಣ್ಣೆಯಿಲ್ಲದ ಎಣ್ಣೆ ಗಡಿಗೆ ಇತ್ಯಾದಿ. ಅಟ್ಟದ ಮೇಲೆ ಕಡ್ಲೆಕಾಯಿಯ ಮೂಟೆಯನ್ನು ಅಡಗಿಸಿಟ್ಟಿರಬಹುದೆನಿಸಿದಾಗ ರೇವಣ್ಣನನ್ನು ಹೆಗಲಲ್ಲಿ ಹೊತ್ತು ಪಿ.ಸಿ.ಗಳು ಶೋಧನೆ ನಡೆಸಿದರು. ಅಲ್ಲಿ ಹಳೆ

ಚಾಪೆಗಳು, ಇಲಿ ಪಿಕ್ಕೆಗಳು, ಸವಕಲು ನಾಣ್ಯಗಳು, ಧೂಳು ಮೊದಲಾದವು ದೊರಕಿದವು. ಕಡ್ಲೆಕಾಯಿಯ ಮೂಟೆ ಸಿಗಲಿಲ್ಲ. ರೇವನಣ ನಿಟ್ಟುಸಿರು ಬಿಡುತ್ತಾ ಮಂಕುಮುಖ ಹಾಕಿಕೊಂಡು ನಿಂತನು. ಪೋಲೀಸ್ ಇನ್ಸ್‌ಪೆಕ್ಟರ್ ರೇವಣ್ಣನ ಮುಖಕ್ಕೆ ಮಂಗಳಾರತಿ ಮಾಡಿದರು. ಅವನು ಮಾತ್ರ ಮೂಟೆಯನ್ನು ಹಟ್ಟಿಯೊಳಗೆ ಒಯ್ದುದುದನ್ನು ತಾನು ಕಣ್ಣಾರೆ ಕಂಡಿದ್ದಾಗಿ ನುಡಿದನು. ಇನ್ಸ್‌ಪೆಕ್ಟರ್ ಜೋರು ಮಾಡಿದಾಗ ಪ್ರತ್ಯುತ್ತರ ಕೊಡಲಾರದೆ ಭಯಭೀತನಾಗಿ ರೇವಣ್ಣ ಕೈಮುಗಿದು ನಿಂತನು. "ಕಣ್ಣಾರೆ ನೋಡಿದೆ ಅಂತೀಯಾ? ಮೂಟೆ ಎಲ್ಲಿ ಹೋಯ್ತಯ್ಯಾ? ಮನೆಯವರೆಲ್ಲಾ ಸೇರಿ ಒಂದಕ್ಕೆರಡು ಅಂತ ತಿಂದ್ರೂನೂವೆ ಮೂಟೆ ಮುಗಿತದೇನಯ್ಯಾ?" ಎಂದು ಬೈದಾಗ ರೇವಣ್ಣ ಆಕಾಶ ಭೂಮಿಯನ್ನು ನೋಡುವಂತಾಯಿತು. ಆದರೆ ರೇವಣ್ಣನಿಗೆ ಮನಸ್ಸಿನಲ್ಲಿ ಈ ರಾಕ್ಷಸ ಜನ ಕಡ್ಲೆಕಾಯಿ ಮೂಟೆಯನ್ನು ತಿಂದುಹಾಕಿರಬೇಕೆನಿಸಿತು.

ಇನ್ಸ್‌ಪೆಕ್ಟರ್ ಕಾಳಣ್ಣರನ್ನು ಕುರಿತು ಮತ್ತೊಮ್ಮೆ ಏನಾದರೂ ಸ್ವಲ್ಪ ಸುಳಿವು ಸಿಕ್ಕರೂ ಚಮಡ ಸುಲಿಯುವುದಾಗಿ ಹೇಳಿ ನೆಲವನ್ನು ಬೂಟು ಕಾಲಿನಿಂದ ಒದ್ದು ಹೊರಗೆ ಹೊರಟರು. ಟೊಳ್ಳಿನ ಧವನಿಯನ್ನು ಗುರುತಿಸಿ ರೇವಣ್ಣ ನೆಲವನ್ನು ಕುಟ್ಟಿದಾಗ ನೆಲದ ಬಿಲ ಒಡೆದು ಅಲ್ಲಿ ನಾಲ್ಕಾರು ಇಲಿಗಳು ಹೊರಬಂದವು. ಅಲ್ಲಿ ನಾಲ್ಕಾರು ಕಡ್ಲೆಕಾಯಿಗಳು ಬಿದ್ದಿದ್ದವು. ಅದನ್ನು ನೋಡಿ "ರೇವಣ್ಣ "ಸಿಕ್ತು ಸ್ವಾಮಿ" ಎಂದಾಗ ಅದನ್ನೆಲ್ಲ ಸೇರಿಸಿ ಗಂಟು ಕಟ್ಟಿಕೊಂಡು ಮನೆಗೆ ಹೋಗಲು ಇನ್ಸ್‌ಪೆಕ್ಟರ್ ಹೇಳಿದರು.

೧೦) ಇನ್ಸ್‌ಪೆಕ್ಟರ್ ಮನೆಯಿಂದ ಹೊರಡುತ್ತಿದಂತೆ ಸಾಕವ್ವ ತನ್ನ ಹುಂಜ ಕಳುವಾಗಿರುವ ವಿಚಾರವನ್ನು ಹೇಳಿ ಅದನ್ನು ದೊರಕಿಸಿಕೊಡಬೇಕೆಂದು ಕೇಳಿಕೊಂಡಳು. ಇನ್ಸ್‌ಪೆಕ್ಟರ್ ಆ ಹುಂಜ ಯಾವ ರೀತಿ ಇತ್ತೆಂದು ಕೇಳಿದಾಗ ಸಾಕವ್ವ ಪಂಜರದಿಂದ ಒಂದು ದೊಡ್ಡ ಹುಂಜವನ್ನು ತೆಗೆದು ಅದರಂತೆ ಇತ್ತೆಂದೂ, ತಾನು ಬಹಷ ಪಷ್ಟಪಟ್ಟು ಸಾಕಿ ಬೆಳೆಸಿದ್ದುದಾಗಿ ಹೇಳಿದಳು. ಆ ಹೊತ್ತಿಗೆ ಹುಂಜ ಓಡಿಹೋಯಿತು. ಆ ಹುಂಜವನ್ನು ಹಿಡಿದುಕೊಟ್ಟರೆ ಕಳೆದುರುವ ಹುಂಜವನ್ನು ಹುಡಿಕಿಕೊಡುವುದಾಗಿ ಇನ್ಸ್‌ಪೆಕ್ಟರ್ ಹೇಳಿದ್ದನ್ನು ಪೂರ್ಣವಾಗಿ ನಂಬಿ ಸಾಕವ್ವನ ಮನೆಯವರೆಲ್ಲ ಹುಂಜವನ್ನು ಬಹುದೂರ ಅಟ್ಟಿಸಿಕೊಂಡು ಹೋಗಿ ಹಿಡಿದು, ಅದರ ಕಾಲು ಕಟ್ಟಿ ಇನ್ಸ್‌ಪೆಕ್ಟರ್‌ಗೆ ಕೊಟ್ಟರು. ಅವರು ಹುಂಜದೊಡನೆ ಜೀಪಿನಲ್ಲಿ ಹೊರಟೇಹೋದರು.

ಸಾಕವ್ವ ಕಳೆದುಹೋದ ಹುಂಜವನ್ನು ಪಡೆಯಲು ಯತ್ನಿಸಿ ಇದ್ದ ಒಂದು ಹುಂಜವನ್ನೂ ಕಳೆದುಕೊಂಡಳು. ಈ ರೀತಿ ಒಡಲಾಳ ಕತೆಯಲ್ಲಿ ಶೋಷಿತರ ಮೇಲೆ ನಡೆಯುವ ಶೋಷಣೆಯನ್ನು ಮನಮುಟ್ಟುವಂತೆ ದೇವನೂರು ಕತೆಉದ್ದಕ್ಕೂ ನಿರೂಪಿಸುತ್ತಾರೆ. ಸಾಕವ್ವನ ಹುಂಜ ಕಳೆದುಕೊಂಡು ಹುಡುಕಿಕೊಡುವಂತೆ ಪೋಲೀಸ್ ಅಧಿಕಾರಿಯ ಬಳಿ ನೋವನ್ನು ತೋಡಿಕೊಂಡಾಗ ಮತ್ತೊಂದು ಕೋಳಿಯನ್ನು ಕಳೆದುಕೊಳ್ಳುವುದರ ಮುಖಾಂತರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬೆಳಕನ್ನು ಕಾಣದೆ ಅಮಾಯಕ ಸ್ಥಿತಿಯನ್ನು ಒಡಲಾಳ ಕತೆಯಲ್ಲಿ ಕಾಣಬಹುದಾಗಿದೆ. ಶೈಕ್ಷಣಿಕವಾಗಿ ಜ್ಞಾನವನ್ನು ಹೊಂದಿದಾಗ ಮಾತ್ರ ದಲಿತರ ಉದ್ದಾರ ಎಂಬುದನ್ನು ದೇವನೂರು ಅವರು ಕತೆ ಮುಖಾಂತರ ಅನಾವರಣಗೊಳಿಸಿದ್ದಾರೆ.

**ಗ್ರಂಥಋಣ**


೧) ಒಡಲಾಳ – ದೇವನೂರು ಮಹಾದೇವ,
೨) ಚೋಮನದುಡಿ – ಶಿವರಾಮ ಕಾರಂತ
೩) ಸಂಸ್ಕಾರ–ಅನಂತಮೂರ್ತಿ – ಅಕ್ಷರ ಪ್ರಕಾಶನ ಹೆಗ್ಗೋಡು
೪) ಕಾನೂರು ಹೆಗ್ಗಡ್ತಿ – ಕುವೆಂಪು–ಉದಯರವಿ ಪ್ರಕಾಶನ
೫) ಮಲೆಗಳಲ್ಲಿ ಮದುಮಗಳು – ಕುವೆಂಪು–ಉದಯರವಿ ಪ್ರಕಾಶನ ಮೈಸೂರು
೬) ಕಾದಂಬರಿ ಲೋಕ – ಹಾ.ಮಾ. ನಾಯಕ–ಗೀತಾ ಬುಕ್ ಹೌಸ್
೭) ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು – ವಿವೇಕ ರೈ– ಮಂಗಳೂರು ವಿವಿ
೮) ಊರುಕೇರಿ – ಡಾ.ಸಿದ್ಧಲಿಂಗಯ್ಯ–ಅಂಕಿತ ಪ್ರಕಾಶನ.
೯) ಕಾದಂಬರಿ ವಸ್ತು–ತಂತ್ರ – ಗಿರಡ್ಡಿ ಗೋವಿಂದರಾಜು–ಸ್ನೇಹ ಪ್ರಕಾಶನ,
೧೦) ಕರಿಮಾಯಿ – ಚಂದ್ರಶೇಖರ ಕಂಬಾರ–ಹೆಗ್ಗೋಡು
೧೧)ಕುಸುಮಬಾಲೆ – ದೇವನೂರು ಮಹಾದೇವ, ಮೈಸೂರು